ಅ.ದಾ.ನಂ.472/2012
ಪಿ.ಡಬ್ಲೂ:1

**ಸಾಕ್ಷಿಯನ್ನು ಇಂದು ದಿನಾಂಕಃ 09.01.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀಮತಿ. ಎಸ್ ಆರ್ ಜಿ , ವಕೀಲರಿಂದ ಪ್ರತಿವಾದಿಯರ ಪರವಾಗಿ**

6. ನಾನು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರವನ್ನು 2ನೇ ವಾದಿಯಾದ ಸುರೇಖಾ, 3ನೇ ವಾದಿಯಾದ ನಿಂಗಯ್ಯ ಮತ್ತು 4ನೇ ವಾದಿಯಾದ ಸಿದ್ದಲಿಂಗಯ್ಯರವರ ಪರವಾಗಿ ಹಾಕಿರುವುದಿಲ್ಲ. ಕಾಸವ್ವರವರು ಯಾವಾಗ ಮೃತ ಪಟ್ಟಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಕಾಸವ್ವರವರ ಹೆಸರು ಎಷ್ಟನೇ ಇಸ್ವಿಯವರೆಗೆ ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯನ್ನು ಶಿವಯ್ಯ ಮತ್ತು ಶಿವಲಿಂಗವ್ವರವರು ಎಷ್ಟನೇ ಇಸ್ವಿಯಲ್ಲಿ ವಾರಸಾ ಮಾಡಿಕೊಂಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಶಿವಯ್ಯ ಮತ್ತು ಶಿವಲಿಂಗವ್ವರವರು ಇಂಗಳೇಶ್ವರದಲ್ಲಿ ಖಾಯಂ ಆಗಿ ವಾಸವಾಗಿದ್ದರು. ನನ್ನ ಅಜ್ಜಿಯು ಕಾಸವ್ವರವರು ಬೊಮ್ಮನಹಳ್ಳಿಯಲ್ಲಿ ವಾಸವಾಗಿದ್ದರು.

7. ಕಾಸವ್ವ ಮೃತ ಪಟ್ಟ ನಂತರ ಶಿವಯ್ಯ ಮತ್ತು ಶಿವಲಿಂಗವ್ವರವರು ಇಂಗಳೇಶ್ವರ ಗ್ರಾಮಕ್ಕೆ ಹೋಗಿರುತ್ತಾರೆ. ಶಿವಯ್ಯರವರು ಮೃತ ಪಟ್ಟು ಸುಮಾರು 15ವರ್ಷ ಆಗಿರುತ್ತದೆ. ಶಿವಲಿಂಗವ್ವರವರು ಮೃತ ಪಟ್ಟು ಸುಮಾರು 8-10 ವರ್ಷ ಆಗಿರಹುದು. ಶಿವಯ್ಯ ಮತ್ತು ಶಿವಲಿಂಗವ್ವರವರ ಮರಣ ಪ್ರಮಾಣ ಪತ್ರಗಳನ್ನು ಈ ದಾವೆಯಲ್ಲಿ ನಾನು ಹಾಜರು ಪಡಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

8. ದಾವಾ ಆಸ್ತಿಯಲ್ಲಿ ನಾನು 1998 ರಿಂದ 2012 ರವರೆಗೆ ಸ್ವಾಧೀನಾನುಭವದಲ್ಲಿ ಇರುತ್ತೇನೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನಾನು ಯಾವ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ನನಗೆ ನೆನಪು ಇರುವುದಿಲ್ಲ. ಸಾಕ್ಷಿಗೆ ನಿಪಿ-1 ರಿಂದ 16 ರ ದಾಖಲಾತಿಗಳನ್ನು ತೋರಿಸಿ ಸದರಿ ದಾಖಲಾತಿಗಳಲ್ಲಿ ನೀವು ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇರುವ ಬಗ್ಗೆ ಯಾವ ದಾಖಲಾತಿಗಳಲ್ಲಿ ನಮೂದು ಇರುತ್ತದೆ ಎಂದು ತೋರಿಸುವಂತೆ ಕೇಳಲಾಗಿ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ.

9. ನಾನು ಹಾಜರುಪಡಿಸಿರುವ ನಿಪಿ-5 ರ ದಾಖಲಾತಿಯ ಪ್ರಕಾರ ದಾವಾ ಆಸ್ತಿಯ ಹಳೇ ಸರ್ವೇ ನಂ.38/1 ಮತ್ತು 78/2 ಇರುತ್ತವೆ ಎಂದರೆ ನನಗೆ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ನಿಪಿ-5 ರ ದಾಖಲಾತಿಯ ಅನುಕ್ರಮ ನಂ.19 ರಲ್ಲಿ 2 ನೇ ಕಾಲಂನಲ್ಲಿ ಪರಮಾನಂದ ವಹಿವಾಟದಾರರು ಕಾಸವ್ವ ಗಂ.ಶಿವಲಿಂಗಯ್ಯ ಎಂದು ನಮೂದು ಇರುತ್ತದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲಾತಿಗಳ ಪ್ರಕಾರ ದಾವಾ ಆಸ್ತಿಯು ಪರಮಾನಂದ ದೇವಸ್ಥಾನದ ಮಾಲ್ಕಿ ಆಸ್ತಿ ಎಂದರೆ ಸರಿ. ನನ್ನ ಅಜ್ಜಿಯಾದ ಕಾಸವ್ವರವರು ದಾವಾ ಆಸ್ತಿಯನ್ನು ಕೇವಲ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ದಾವಾ ಅಸ್ತಿಯು ಪರಮಾನಂದ ದೇವಸ್ಥಾನಕ್ಕೆ ಸಂಬಂಧಿಸಿರುವುದರಿಂದ ದಾವಾ ಆಸ್ತಿಯ ಮಾಲೀಕತ್ವ ನಮಗೆ ಬರುವುದಿಲ್ಲ ಎಂದರೆ ಸರಿಯಲ್ಲ.

10. ಪರಮಾನಂದ ದೇವಸ್ಥಾನದ ಪೂಜೆಯನ್ನು ಶಾಂತಯ್ಯ ಎಂಬುವವರು ಮಾಡುತ್ತಿರುತ್ತಾರೆ. ಪರಮಾನಂದ ದೇವಸ್ಥಾನದ ಪೂಜೆಯನ್ನು ಮೊದಲು ಶರಣಯ್ಯ ಎಂಬುವವರು ಮಾಡುತ್ತಿದ್ದರು. ಸದರಿ ಶರಣಯ್ಯನ ತಂದೆಯ ಹೆಸರು ಮತ್ತು ಅವರ ಅಡ್ಡ ಹೆಸರು ನನಗೆ

ಗೊತ್ತಿಲ್ಲ. ಶಾಂತಯ್ಯನ ತಂದೆಯ ಹೆಸರು ನನಗೆ ಗೊತ್ತಿಲ್ಲ. ಸದರಿ ಶಾಂತಯ್ಯನು ಬೋಮ್ಮನಹಳ್ಳಿ ವಾಸಿ ಆಗಿರುತ್ತಾನೆ. ಶಾಂತಯ್ಯನು ಪರಮಾನಂದ ದೇವಸ್ಥಾನದ ಪೂಜೆಯನ್ನು ಎಷ್ಟು ವರ್ಷದಿಂದ ಮಾಡುತ್ತಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಶಾಂತಯ್ಯ ಮತ್ತು ಶರಣಯ್ಯರವರಿಗೆ ಸಂಬಳವನ್ನು ಸರ್ಕಾರದಿಂದ ಕೊಡಲಾಗುತ್ತಿತ್ತು. ಶಾಂತಯ್ಯ ಮತ್ತು ಶರಣಯ್ಯರವರಿಗೆ ಸರ್ಕಾರದಿಂದ ಸಂಬಳವನ್ನು ಕೊಡುತ್ತಿರುವ ಬಗ್ಗೆ ನಾನು ಯಾವುದೇ ದಾಖಲಾತಿಗಳನ್ನು ನಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಪರಮಾನಂದ ದೇವಸ್ಥಾನದ ಪೂಜೆಯನ್ನು ಮೊದಲು ಶರಣಯ್ಯ ಮತ್ತು ಈಗ ಶಾಂತಯ್ಯರವರು ಮಾಡುತ್ತಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದವರೆದು ಪರಮಾನಂದ ದೇವಸ್ಥಾನದ ಪೂಜೆಯನ್ನು ಶರಣಯ್ಯ ಮತ್ತು ಶಾಂತಯ್ಯ ಮಾಡುವ ವಿಚಾರವನ್ನು ನನಗೆ ಕಮೀಟಿಯವರು ಹೇಳಿರುತ್ತಾರೆ ಎಂದುಹೇಳುತ್ತಾರೆ.

11. ದಾವಾ ಆಸ್ತಿಯು ಈಗಲೂ ಸಹ ಕೃಷಿ ಜಮೀನು ಆಗಿರುತ್ತದೆ. ಈ ದಾವೆಯನ್ನು ಸಲ್ಲಿಸುವ 2-3 ವರ್ಷಗಳ ಹಿಂದೆ ದಾವಾ ಆಸ್ತಿಯಲ್ಲಿ ಮಂಗಲ ಕಾರ್ಯಾಲಯ ಮತ್ತು ಮಂಗಲ ಮಂಟಪಗಳನ್ನು ನಿರ್ಮಾಣ ಮಾಡುವ ಉದ್ದೇಶದಿಂದ ಸಾರ್ವಜನಿಕರಿಂದ ಹಣ ಸಂಗ್ರಹಿಸಿರುತ್ತಾರೆ ಎಂದು ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೆ. ನಾನು ಈ ಕುರಿತು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯು ಕೃಷಿ ಜಮೀನು ಆಗಿರುವುದರಿಂದ ಸದರಿ ದಾವಾ ಆಸ್ತಿಯಲ್ಲಿ ಮಂಗಲ ಕಾರ್ಯಾಲಯ ಮತ್ತು ಮಂಗಲ ಮಂಟಪಗಳನ್ನು ನಿರ್ಮಾಣ ಮಾಡುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಪರಮಾನಂದ ದೇವಸ್ಥಾನದ ಕಮೀಟಿಯ ಸದಸ್ಯರು ಎಂದು ಹೇಳಿಕೊಳ್ಳುವ ಕಮಿಟಿಯ ಸದಸ್ಯರ ಮಾತನ್ನು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ.

12. ಕಾಸವ್ವಳಿಗೆ ಚನ್ನಯ್ಯ, ಶಿವಯ್ಯ ಮತ್ತು ಶಿವಲಿಂಗವ್ವ ಎಂಬ ಮೂರು ಜನ ಮಕ್ಕಳು ಎಂದರೆ ಸಾಕ್ಷಿಯು ಶಿವಯ್ಯ ಮತ್ತು ಶಿವಲಿಂಗವ್ವ ಇಬ್ಬರೇ ಮಕ್ಕಳು ಎಂದು ಹೇಳುತ್ತಾರೆ. ಚನ್ನಯ್ಯನಿಗೆ ದುಂಡಯ್ಯ ಮತ್ತು ಸಿದ್ದಯ್ಯ ಎಂಬ ಇಬ್ಬರೂ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. 1996 ರಲ್ಲಿ ದಾವಾ ಆಸ್ತಿಯ ಖಾತೆಯನ್ನು ಶಿವಯ್ಯ ಮತ್ತು ಶಿವಲಿಂಗವ್ವ ಇಬ್ಬರೇ ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅವರು ಇಬ್ಬರೇ ಕಾಸವ್ವನ ಮಕ್ಕಳು ಎಂದು ಹೇಳುತ್ತಾರೆ. ನನ್ನ ತಂದೆಯ ಮರಣಾನಂತರ ನಮಗೆ ಒಂದೇ ಆಸ್ತಿಯು ವಾರಸಾ ಮುಖಾಂತರ ಬಂದಿರುತ್ತದೆ. ನನ್ನ ತಂದೆಯ ಹೆಸರಿನಲ್ಲಿ ಮನೆ ಇತ್ತು ಎಂದರೆ ಸರಿ. ನನ್ನ ತಂದೆಯ ಮೃತ ಪಟ್ಟ ನಂತರ ನನ್ನ ತಂದೆಯ ಹೆಸರಿನಲ್ಲಿರುವ ಮನೆಯನ್ನು ನಮ್ಮ ಹೆಸರಿಗೆ ವಾರಸಾ ಮಾಡಿಕೊಂಡಿರುವುದಿಲ್ಲ. ನನ್ನ ತಂದೆಯು ಮೃತ ಪಟ್ಟ ನಂತರ ದಾವಾ ಆಸ್ತಿಯನ್ನು ನನ್ನ ಹೆಸರಿಗೆ ವಾರಸಾ ಮಾಡಿಕೊಳ್ಳಲು ನಾನು ತಹಶೀಲ್ದಾರವರಿಗೆ ಯಾವುದೇ ಅರ್ಜಿಯನ್ನು ಕೊಟ್ಟಿರುವುದಿಲ್ಲ.

**ಈ ಹಂತದಲ್ಲಿ ಪ್ರತಿವಾದಿಯರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

**ಮರುವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

1 ನೇ **ಹೆಚ್ಚುವರಿ ಸಿವಿಲ್**
**ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**